ಆ) ಹೂಳೆತ್ತಲು ಪ್ರಸಕ್ತರ ಅಥವಾ ಹಿಂದಿನ ಸಾಲುಗಳಲ್ಲಿನ ಆಯವ್ಯಯದಲ್ಲಿ ಹಣವನ್ನು ಕಾದಿರಿಸಲಾಗಿದೆಯೇ;

ಇ) ಭದ್ರಾ ಎಡದಂಡೆ ನಾಲಾ, ಮುಖ್ಯ ನಾಲಾ ಮತ್ತು ಉಪನಾಲೆಗಳ ತೂಬು ಆಧುನೀಕರಣ ದುರಸ್ತಿಗಾಗಿ 2001–2002, 2002–2003, 2003–2004 ರಲ್ಲಿ ಮಾಡಲಾದ ವೆಚ್ಚವೆಷ್ಟು;

ಈ) ಈ ರೀತಿ ದುರಸ್ತಿ ಪಡಿಸಿದ ನಾಲೆಯ ಉದ್ದ ಎಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಭದ್ರಾ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆ ಆಗುವ ಕುರಿತು ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಸಂಸ್ಥೆ ಕೃಷ್ಣರಾಜಸಾಗರ ಇವರು ಸರ್ವೆ ಮಾಡಿದ್ದು ಸದರಿ ವರದಿಯಂತೆ ಹೊಳು ತುಂಬುವ ಪ್ರಮಾಣವು ಬಹಳ ಕಡಿಮೆ ಇರುತ್ತದೆ. ಈ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆ. ಗೊಂದಿ ಡ್ಯಾಂ ಅಣೆಕಟ್ಟು ಆಗಿರುವುದರಿಂದ ಯಾವುದೇ ಸಂಗ್ರಹಣಾ ಸಾಮರ್ಥ್ಯವಿರುವುದಿಲ್ಲ.

ಆ) ನಿರ್ದಿಷ್ಟವಾಗಿ ಹಣವನ್ನು ಕಾಯ್ದಿರಿಸಿರುವುದಿಲ್ಲ.

ಇ) 2001–02,2002–03 ಹಾಗೂ 2003–04 ರ ಸಾಲಿನಲ್ಲಿ ಭದ್ರಾ ಆಧುನೀಕರಣ ಅಡಿಯಲ್ಲಿ ಭದ್ರಾ ಎಡದಂಡೆ ನಾಲಾ, ಮುಖ್ಯನಾಲಾ ಮತ್ತು ಉಪನಾಲೆಗಳ ತೂಬು ಆಧುನೀಕರಣ : ದುರಸ್ತಿಗಾಗಿ ಯಾವುದೇ ಹಣವನ್ನು ವೆಚ್ಚ ಮಾಡಿರುವುದಿಲ್ಲ.

ಆದಾಗ್ಯೂ ಪ್ರತಿ ವರ್ಷ ನಾಲಾ ನಿರ್ವಹಣಾ ಅನುದಾನದಲ್ಲಿ ಅವಶ್ಯಕನಿರ್ವಹಣಾ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

1043(1276) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ನಗರ ಪಾಲಿಕೆಯ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಗುತ್ತಿಗೆ ಕಾರ್ಮಿಕರು ಯಾರ್ಯಾರು;

ಆ) ಈ ಪೈಕಿ ಜಲಮಂಡಳಿಯಿಂದ ಹಸ್ತಾಂತರಗೊಂಡ ಮಂದಿ ಯಾರ್ಯಾರು;(ಹುದ್ದೆವಾರು ವಿವರ ನೀಡುವುದು);

ಇ) ಮೈಸೂರು ನಗರದ ಸಮರ್ಪಕ ನೀರು ಸರಬರಾಜು ನಿರ್ವಹಣೆಗೆ ಅಗತ್ಯವಿರುವ ಸಿಬ್ಬಂದಿ ಎಷ್ಟು; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಎಷ್ಟು ;

ಈ) ಮೈಸೂರು ನಗರ ಪಾಲಿಕೆ ವಾಣಿವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ಹಾಲಿ ಗುತ್ತಿಗೆ ಕಾರ್ಮಿಕರಿಗೆ ಯಾವ ರೀತಿ ವೇತನ ಪಾವತಿಸಲಾಗುತ್ತಿದೆ ಹಾಗೂ ಜಲ ಮಂಡಳಿಯ ಅಧಿಕಾರ ಅವಧಿಯಲ್ಲಿ ಯಾವ ರೀತಿ ವೇತನ ಪಾವತಿಸಲಾಗುತ್ತಿತ್ತು;

ಉ) ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ಹಾಲಿ ಇರುವ ಗುತ್ತಿಗೆ ಕಾರ್ಮಿಕರು ನಿರಂತರವಾಗಿ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಸದರಿಯವರಿಗೆ ಗುತ್ತಿಗೆದಾರರಿಂದ ವೇತನ, ಪಿ.ಎಫ್. ಮೊತ್ತದ ಹಂಚಿಕೆಯಲ್ಲಿ ವಂಚನೆ ಯಾಗುತ್ತಿರುವುದು ಸರ್ಕಾರದ ಅರಿವಿಗೆ ಬಂದಿದೆಯೇ :

ಊ) ಹಾಗಿದ್ದಲ್ಲಿ, ಗುತ್ತಿಗೆದಾರರ ವಿರುದ್ಧ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ;

ಋ) ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ನೀರು ಸರಬರಾಜು ನಿರ್ವಹಣೆಗಾಗಿ ಗುತ್ತಿಗೆ ಕಾರ್ಮಿಕರನ್ನು ನಿಯೋಜಿಸಲು ಪ್ರಧಾನ ಉದ್ಯೋಗದಾತರಾದ ನಗರ ಪಾಲಿಕೆಯು ಕಾರ್ಮಿಕ ಇಲಾಖೆಯಲ್ಲಿ ನೊಂದಣಿ ಮಾಡಿಸಿದೆಯೇ ;

ಋೂ) ಹಾಲಿ ಗುತ್ತಿಗೆದಾರರು ಸದರಿ ಉದ್ದೇಶಕ್ಕಾಗಿ ಕಾನೂನುಬದ್ದವಾಗಿ ಕಾರ್ಮಿಕ ಇಲಾಖೆಯಿಂದ ಲೈಸನ್ಸ್ ಪಡೆದಿದ್ದಾರೆಯೇ ;

ಎ) ಇಲ್ಲದಿದ್ದಲ್ಲಿ, ಕಾರ್ಮಿಕ ನಿಯಮಗಳನುಸಾರ ಕ್ರಿಮಿನಲ್ ಅಪರಾಧ ವಲ್ಲವೆ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು):

ಅ) ಮೈಸೂರು ನಗರದಲ್ಲಿ ನೀರು ಸರಬರಾಜು ನಿರ್ವಹಣೆ ಗುತ್ತಿಗೆದಾರರಿಂದ 268 ಮಂದಿಯನ್ನು ಪಡೆದು ಕೆಲಸ ನಿರ್ವಹಿಸಲಾಗುತ್ತಿದೆ.

ಆ) 179 ಮಂದಿ ಕೆಲಸ ವನಿರ್ವಹಿಸುತ್ತಿದ್ದರು.

ಇ) ಮೈಸೂರು ನಗರದ ನೀರು ಸರಬರಾಜಿಗೆ ಅಗತ್ಯವಿರುವ ಸಿಬ್ಬಂದಿ 697 ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ

ಖಾಯಂ ನೌಕರರು	–	360
ಗುತ್ತಿಗೆದಾರರ ವತಿಯಿಂದ	–	268
ಒಟ್ಟು	–	**628**

ಈ) ಟೆಂಡರ್ ಕರೆದು ಗುತ್ತಿಗದಾರರನ್ನು ನೇಮಿಸಲಾಗಿದೆ. ನಗರ ಪಾಲಿಕೆ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಿ ಗುತ್ತಿಗೆದಾರರು ನೌಕರರಿಗೆ ಹಣ ಪಾವತಿ ಮಾಡುತ್ತಿದ್ದಾರೆ. ಜಲಮಂಡಳಿಯ ಅವಧಿಯಲ್ಲಿ ಹಣ ಸಂದ ರಸೀತಿ (ಹ್ಯಾಂಡ್ ರಸಿಟ್) ಆಧಾರದಲ್ಲಿ ವೇತನ ಪಾವತಿಸಲಾಗುತ್ತಿತ್ತು.

ಉ) ಹೌದು. 20002ನೇ ಸಾಲಿನಿಂದ ಗುತ್ತಿಗೆದಾರರ ಮೂಲಕ ಕಾರ್ಯನಿರ್ವಹಿಸುತ್ತಿದ್ದಾರೆ.

ಊ) ಪಿ.ಎಫ್. ಮೊತ್ತದ ಪಾವತಿ ವಿಚಾರವಾಗಿ ಸಹಾಯಕ ಆಯುಕ್ತರು, ಕಾರ್ಮಿಕ ಭವಿಷ್ಯ ನಿಧಿ ಇಲಾಖೆ, ಮೈಸೂರು ಇವರು ಪ್ರಕರಣ ಸಂ. ಕೆ.ಎನ್/ಪಿ.ಎಫ್. 36266/2004 ಮತ್ತು ಸಂ.ಕೆ.ಎನ್/ಪಿ.ಎಫ್/36252/2004 ವಿಚಾರಣೆ ನಡೆಸುತ್ತಿದ್ದಾರೆ. ಇಲ್ಲಿ ಆಗುವ ತೀರ್ಮಾನದಂತೆ ಕ್ರಮ ಕೂಗೊಳ್ಳಲಾಗುವುದು.

ಋ) ನೋಂದಣಿ ದೃಢೀಕರಣ ಪತ್ರವನ್ನು ಪಡೆಯಲಾಗಿರುತ್ತದೆ.

ಋೂ.ಎ) ಹಾಲಿ ಗುತ್ತಿಗೆದಾರರು ಲೈಸನ್ಸ್‌ನ್ನು ಪಡೆದಿದ್ದು, ಅದನ್ನು ಸಹಾಯಕ ಕಾರ್ಮಿಕ ಆಯುಕ್ತರು 12/2004ರಲ್ಲಿ ರದ್ದುಪಡಿಸಿದ್ದರು. ಇದನ್ನು ಪ್ರಶ್ನಿಸಿ ಗುತ್ತಿಗೆದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ.

1044(1277) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ನಗರದ ಕುವೆಂಪು ನಗರದಲ್ಲಿರುವ ಉದಯರವಿ ರಸ್ತೆಯಿಂದ ಸಿಲ್ಕ್ ಫ್ಯಾಕ್ಟರಿ ವೃತ್ತದವರೆಗೆ ಸಂಪರ್ಕ ಕಲ್ಪಿಸಲು ರೈಲ್ವೆ ಅಂಡರ್ ಬ್ರಿಡ್ಜ್ ಯೋಜನೆಯ ವೆಚ್ಚಕ್ಕಾಗಿ ಮೈಸೂರು ನಗರ ಪಾಲಿಕೆ ಎಷ್ಟು ಹಣವನ್ನು ರೈಲ್ವೆ ಇಲಾಖೆಗೆ ಪಾವತಿಸಿದೆ;